

# ಜೀ ಜೀ ಜಾಜೀ ಹೂವ ನೋಡಿ ಸೂಜೀ

-ಡಾ.ಸತ್ಯ

ಅತ್ತ ಪೊದರೂ ಅಲ್ಲದ ಇತ್ತ ಬಳ್ಳಿಯೂ ಅಲ್ಲದ ಸುಂದರ ಪರಿಮಳದ ಸುಮವರಳಸುವ ಜಾಜಿ ಗೊತ್ತಿದೆ ತಾನೆ? ನಿಮ್ಮ ಮನೆಯಂಗಳದಲ್ಲಿ ಅದು ಇದೆಯೆ? ಅದರ ಕೃಷಿ ಮತ್ತು ಬಳಕೆ ಅರಿಯೋಣವೆ? ಸೂಜಿ ಮಲ್ಲಿಗೆ, ಏಳು ಸುತ್ತಿನ ಮಲ್ಲಿಗೆ, ಅಂಬೂರ್ ಮಲ್ಲಿಗೆ, ಮಂಗಳೂರು ಮಲ್ಲಿಗೆ, ಭಟ್ಕಳ ಮಲ್ಲಿಗೆ ಹೀಗೆ ನಾನಾ ಜಾತಿಯ ಮಲ್ಲಿಗೆಗಳವೆ. ಜಾಜಿಯ ಜಾತಿ ಸಹ ಅದೇ ಗುಂಪಿಗೆ ಸೇರಿದ ಸಸ್ಯ. ದೇವಭಾಷೆಯಲ್ಲಿ ಇದಕ್ಕೆ ಜಾತಿ ಎಂದೇ ಹೆಸರು! ಕಿರಿ ಹೂ, ಉದ್ದನೆ ಹೂ, ಅಚ್ಚ ಬಿಳಿ ಹೂ, ಕೆಂಪನೆ ಗೀರಿನ ಎಸಳು, ಪೂರ ಕೆಂಪನೆ ಹೂ ಇತ್ಯಾದಿ ನಾನಾ ಜಾತಿಗಳ ಹೂಗಳ ದೆಸೆಯಿಂದ ಜಾಜಿಯ ವೈವಿಧ್ಯ ಗುರುತಿಸಬಹುದು. ಬಹುತೇಕ ಎಲೆ ಸಾಮ್ಯವಿರುವ  ಜಾಜಿಯ ಈ ಪ್ರಭೇದ ಗುರುತಿಸಲು ಹೂವಿನ ಸಹಾಯ ಬೇಕೇ ಬೇಕು. ಬಹು ಪಾಲು ಇಡಿಯ ವರುಷ ಹೂವರಳಸುವ ಜಾಜಿಗಿಡವು ಮನೆಯಂಗಳದ ಸೌಭಾಗ್ಯ ಎಂದರೆ ಅತಿಶಯವಿಲ್ಲ. ರಾತ್ರಿ ಹಾರಾಡುವ ಕೀಟ ಸಂಕುಲಕ್ಕೆ ಆಹಾರವೀಯುವ ಬರಿದಾಗದ ಖಜಾನೆ.

ಉತಮ ಮಣ್ಣು, ಆಗಾಗ ಗೊಬ್ಬರ ಮತ್ತು ಯಥೇಚ್ಛ ನೀರುಣಿಸಿದರೆ ಜಾಜಿ ಬೆಳೆ ಸಮೃದ್ಧ. ತನ್ನಿತರ ಸಂಗಾತಿಗಳಗಿಂತ ವಿಭಿನ್ನ ಜಾಜಿ. ಇದರ ಹೂವರಳುವ ಸಮಯ ಸಂಜೆ. ಹಾಗಾಗಿ ಮರುದಿನ ಮುಂಜಾನೆ ತನಕ ಕಾಯಬಲ್ಲ ಹೂಗಳವು. ಬೇಗನೆ ಬಾಡದವು.

ಜಾಜಿ ಗಿಡದ ಹೊಸ ಸಸಿ ಕಸಿ ವಿಧಾನದಿಂದ ಸಿದ್ಧ ಪಡಿಸಿರಿ. ನಿಮ್ಮ ಸ್ನೇಹಿತರ ಮನೆಯಂಗಳದಲ್ಲಿ ಬೆಳೆದಿದ್ದರೆ ಅದರ ಒಂದು ಟೊಂಗೆ ಕೊಂಡೊಯ್ಯಿರಿ. ಅದನ್ನು ಹದ ಮಣ್ಣಿನ ಪಾತಿ ಅಥವಾ ಕುಂಡದಲ್ಲಿ ಊರಿಬಿಡಿ. ಹೊಸ ಸಸಿ ಸಿದ್ಧ. ಬೇಕಾದ ವಿಶಾಲ ಜಾಗದಲ್ಲಿ ನೆಡಿರಿ. ಮನೆ ಗೇಟಿನ ಕಮಾನಿಗೋ,

ಆವರಣದಂಚಿನ ಗೋಡೆಗೋ ಜಾಜಿ ಹಂಬು ಹಬ್ಬಿಸಬಹುದು. ಹಸಿರ ಎಲೆ ರಾಶಿಯ ನಡುವೆ ರಾತ್ರಿ ವೇಳೆ ಅರಳುವ ಬಿಳಿಯ ಹೂಗಳ ಸಂಭ್ರಮ ನೋಡಿ. ನೀಲಿ ಆಗಸದ ನಕ್ಷತ್ರಗಳಂತೆ ಕಂಗೊಳಿಸಿ ನಿಮ್ಮ ಮನ ಗೆಲ್ಲುವುವು. ಅತಿಶಯ ಸುಗಂಧದ ಹೂವಿನ ಅತ್ತರು ತಯಾರಿಸುವರು.

ಜಾಜಿಯ ಉಪಯೋಗ ಮುಡಿಯಲು ಅಥವ ಅತ್ತರಿಗೆ ಮಾತ್ರ ಅಲ್ಲ. ಇದು ಮನೆಯಂಗಳದ ಸಂಜೀವಿನಿ. ಎಲೆ ಮತ್ತು ಹೂಗಳಿಗೆ ನಾನಾವಿಧದ ಮನೆಬಳಕೆಯ ಮದ್ದಿನ ಗುಣಧರ್ಮಗಳಿವೆ. ನೀವೂ ಮಾಡಿರಿ ಇತರರಿಗೆ ಸಲಹೆ ನೀಡಿರಿ.

ಜಾಜಿಯ ಔಷಧಿಬಳಕೆಗಳೇನು?

- ಕಣ್ಣು ಬೇನೆ ಉರಿಯೂತದಲ್ಲಿ ಅರಳಿದ ಹೂಗಳ ಶೀತ ಲೇಪದಿಂದ ಲಾಭವಿದೆ.
- ತಲೆನೋವು, ಉಷ್ಣದ ಗುಳ್ಳೆ, ಪಿತ್ತ ಗಾದರಿ, ಸರ್ಪಸುತ್ತಿನ ಗುಳ್ಳೆಯ ಉಪಶಮನಕ್ಕೆ ಹೂಲೇಪ ಹಿತಕರ.
- ಚರ್ಮರೋಗದಲ್ಲಿ ಎಲೆಯ ಲೇಪದಿಂದ ಲಾಭವಿದೆ.
- ಬಾಯಿಹುಣ್ಣಿನ ಉಪಟಳದಿಂದ ಪಾರಾಗಲು ಜಾಜಿ ಚಿಗುರು ಅಗಿದು ತಿನ್ನ ಬಹುದು.
- ಹಲ್ಲು ನೋವಿನ ಸಮಸ್ಯೆಗೆ ತಾಜಾ ಜಾಜಿ ಎಲೆ ಚಿಗುರು ಜಗಿದು ತಿಂದರೆ ಲಾಭವಿದೆ.
- ಆಯುರ್ವೇದ ಔಷಧಿ ಅಂಗಡಿಗಳಲ್ಲಿ ದೊರೆಯುವ ಜಾತ್ಯಾದಿ ತೈಲ ಎಂಬ ಸರ್ವ ಗಾಯದ ಸಂಜೀವಿನಿ ನಿಮ್ಮ ಮನೆಯಲ್ಲಿರಲಿ. ಅಥವಾ ಆಸಕ್ತಿಯಿದ್ದರೆ ವೈದ್ಯರ ಸಲಹೆ ಪಡೆದು ನೀವೇ ಎಲೆರಸದಿಂದ ತಯಾರಿಸಿ. ಅದನ್ನು ಕಿವಿ ನೋವಿಗೆ ಸಹ ತೊಟ್ಟಿಕ್ಕಿಸಬಹುದು.
- ಬೆರಳ ಸಂದಿನ ನವೆ, ಕೆಸರುಹುಣ್ಣು ಹಲವರಿಗೆ ಸಾಮಾನ್ಯ. ಅದಕ್ಕೆ ಫಂಗಿಸೈಡಲ್ ಗುಳಿಗೆ ಮುಲಾಮು ಹಚ್ಚಿ ಬೇಸತ್ತವರಿದ್ದಾರೆ. ಜಾಜಿ ಎಲೆ ಚಿಗುರಿನ ನಿರಂತರ ಲೇಪ ಕೆಸರು ಹುಣ್ಣಿಗೆ ರಾಮ ಬಾಣ.
- ಆಣಿಯ ತೊಂದರೆ ಸಹ ಹಿರಿ, ಕಿರಿಯರಲ್ಲಿ ಕಿರಿಕಿರಿಯ ತೊಂದರೆ. ಸರ್ಜರಿಯ ಮೊರೆ ಹೋದರೂ ಶಾಶ್ವತ ಪರಿಹಾರವಲ್ಲ. ಜಾಜಿಎಲೆಯ ನಿರಂತರ
- ಲೇಪದ ಉಲ್ಲೇಖವಿದೆ. ಪ್ರಯತ್ನಸಲು ಅಡ್ಡಿಯಿಲ್ಲ.

***